ಹೈದ್ರಾಬಾದ ಕರ್ನಾಟಕ ಪ್ರದೇಶ ಅಭಿವೃದ್ಧಿ ಮಂಡಳಿ
"ಅಭಿವೃದ್ಧಿ ಭವನ" ಐವಾನ-ಎ-ಶಾಹಿ, ಕಲಬುರಗಿ-585102
ದೂರವಾಣಿ: (08472) - 256767,239556,255564, ಫ್ಯಾಕ್ಸ್ :(08472) 227527
Email:hkabdgulb@gmail.com, hkrdbklb@gmail.com
Website: hkrdb.kar.nic.in

ಸಂಖ್ಯೆ:ಹೈಕಪ್ರಅಮಂ/ಯೋ/ತರಬೇತಿ/10/2019

ದಿನಾಂಕ: 13 /8/2019

ಗೆ,

ಸರಕಾರದ ಅಪರ ಮುಖ್ಯ ಕಾರ್ಯದರ್ಶಿಗಳು
ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ,
ವಿಧಾನ ಸೌಧ, ಬೆಂಗಳೂರು:560001
ಮಾನ್ಯರೇ

ವಿಷಯ:- ಹೈದ್ರಾಬಾದ- ಕರ್ನಾಟಕದ ಅಭ್ಯರ್ಥಿಗಳಿಗೆ ಹೆಚ್‌ಕೆಆರ್‌ಡಿಬಿ ಕಲಬುರಗಿ ವತಿಯಿಂದ ತರಬೇತಿ ನೀಡುವ ಕುರಿತು

ಉಲ್ಲೇಖ:- ಸರಕಾರದ ಪತ್ರ ಸಂಖ್ಯೆ:ಸಿಆಸುಇ 6 ರಾಕಾವ್ಯ2012 ದಿನಾಂಕ:30/7/2019

ಮೇಲ್ಕಂಡಿಸಿದ ವಿಷಯ ಹಾಗೂ ಉಲ್ಲೇಖಿತ ಪತ್ರಕ್ಕೆ ಲಗತ್ತಿಸಿದ ನಡಾವಳಿ ಕ್ರಸಂ. 3 ರಲ್ಲಿ ಈ ಕೆಳಗಿನ ನಿರ್ಣಯ ತೆಗೆದುಕೊಳ್ಳಲಾಗಿದೆ.

ಸಾರ್ವಜನಿಕ ಉದ್ಯೋಗದಲ್ಲಿ ಹೈದ್ರಾಬಾದ ಕರ್ನಾಟಕ ಪ್ರದೇಶದ ಸ್ಥಳಿಯ ವ್ಯಕ್ತಿಗಳಿಗೆ ವಯೋಮಿತಿ ಸಡಿಲಿಕೆ ಮತ್ತು ಕೃಪಾಂಕ ಹಾಗೂ ನೇಮಕಾತಿಯಲ್ಲಿ ರಿಯಾಯಿ ನೀಡುವ ಬಗ್ಗೆ.

*ಸದರಿ ವಿಷಯದ ಬಗ್ಗೆ ಸಚಿವ ಸಂಪುಟ ಉಪಸಮಿತಿಯು ಸುಧೀರ್ಘವಾಗಿ ಚರ್ಚಿಸಿ,ಸಾರ್ವಜನಿಕ ಉದ್ಯೋಗದಲ್ಲಿ ಹೈದ್ರಾಬಾದ ಕರ್ನಾಟಕ ಪ್ರದೇಶದ ಸ್ಥಳಿಯ ವ್ಯಕ್ತಿಗಳಿಗೆ ವಯೋಮಿತಿ ಸಡಿಲಿಕೆ ಮತ್ತು ಕೃಪಾಂಕ ಹಾಗೂ ನೇಮಕಾತಿಯಲ್ಲಿ ರಿಯಾಯಿತಿ ನೀಡುವ ಪ್ರಸ್ತಾವನೆಯ ಬಗ್ಗೆ ಕಾನೂನು ಇಲಾಖೆ ಹಾಗೂ ಅಡ್ವೋಕೇಟ್ ಜನರಲ್ ರವರು ಸಂವಿಧಾನಬದ್ಧವಾಗಿಲ್ಲವೆಂದು ಅಭಿಪ್ರಾಯಿಸಿದ್ದು,ಭವಿಷ್ಯದಲ್ಲಿ ಕಾನೂನು ತೊಡುಕುಗಳು ಎದುರಾಗುವ ಸಾಧ್ಯತೆಗಳಿರುವದರಿಂದ ಸಾರ್ವಜನಿಕ ಉದ್ಯೋಗದಲ್ಲಿ ಹೈದ್ರಾಬಾದ ಕರ್ನಾಟಕ ಪ್ರದೇಶದ ಸ್ಥಳಿಯ ವ್ಯಕ್ತಿಗಳಿಗೆ ವಯೋಮಿತಿ ಸಡಿಲಿಕೆ ಮತ್ತು ಕೃಪಾಂಕ ಹಾಗೂ ನೇಮಕಾತಿಯಲ್ಲಿ ರಿಯಾಯಿತಿಗಳನ್ನು ನೀಡುವ ಬದಲಾಗಿ ಹೈದ್ರಾಬಾದ ಕರ್ನಾಟಕದ ಅಭ್ಯರ್ಥಿಗಳು ಸಶಕ್ತವಾಗಲು ಹಾಗೂ ಅವರಿಗೆ ಹೆಚ್ಚು ಹೆಚ್ಚು ನೌಕರಿ ಅವಕಾಶಗಳು ದೊರೆಯುಂತಾಗಲು ಹೆಚ್‌ಕೆಆರ್‌ಡಿಬಿ ವತಿಯಿಂದ ವಿಶೇಷ ವೃತ್ತಿಪರ ತರಬೇತಿಗಳನ್ನು ನೀಡಲು ನಿರ್ಣಯಿಸಲಾಯಿತು.*

ಈ ವಿಷಯ ಕುರಿತು ತಮ್ಮ ಆದ್ಯ ಗಮನಕ್ಕೆ ತರುವುದೇನೆಂದರೆ ಹಿಂದಿನ ವರ್ಷಗಳಲ್ಲಿ ಮಂಡಳಿಯಿಂದ ಟಿಇಟಿ ತರಬೇತಿಗಳು, ನೀಟ್ ಹಾಗೂ ಸಿಇಟಿ ತರಬೇತಿಗಳು ಮತ್ತು ಬ್ಯಾಂಕಿಂಗ ತರಬೇತಿಗಳನ್ನು ಆಯೋಜಿಸಲಾಗಿತ್ತು. ಈ ವರ್ಷವು ಕೂಡಾ ಈ ಭಾಗದ ವಿದ್ಯಾರ್ಥಿಗಳಿಗೆ ಹಾಗೂ ಉದ್ಯೋಗಾಕಾಂಕ್ಷಿಗಳಿಗೆ ತರಬೇತಿಯ ಏರ್ಪಾಡನ್ನು ಮಾಡುವ ಬಗ್ಗೆ ಕ್ರಮ ಕೈಗೊಳ್ಳಲಾಗಿದೆ. ಪ್ರಥಮವಾಗಿ ಈ ಭಾಗದ ವಿದ್ಯಾರ್ಥಿಗಳಿಗೆ ಹಾಗೂ ಉದ್ಯೋಗಾಕಾಂಕ್ಷಿಗಳಿಗೆ ಯಾವ ಕ್ಷೇತ್ರದಲ್ಲಿ ತರಬೇತಿಯನ್ನು ಅಪೇಕ್ಷಿಸುತ್ತಾರೆ ಎಂಬುದನ್ನು ತಿಳಿದುಕೊಳ್ಳಲು ಹೆಚ್‌ಕೆಆರ್‌ಡಿಬಿ ವೆಬ್‌ಸೈಟ್ ಮುಖಾಂತರ ತರಬೇತಿಗಳ ಆಯ್ಕೆ ಕುರಿತು ಅವರ ಆದ್ಯತೆಗಳನ್ನು ಕೇಳಲಾಗಿತ್ತು. ಅವರ ಆದ್ಯತೆಯಂತೆ ಈಗ ಬ್ಯಾಂಕಿಂಗ ಪರೀಕ್ಷೆಗಳಿಗೆ ತರಬೇತಿಯನ್ನು ನೀಡಲು ವ್ಯವಸ್ಥೆಯನ್ನು ಮಾಡಿಕೊಳ್ಳಲಾಗುತ್ತಿದೆ. ಸರಕಾರದ ಸಮಾಜ ಕಲ್ಯಾಣ ಇಲಾಖೆ,ಹಿಂದುಳಿದ ವರ್ಗದ ಕಲ್ಯಾಣ ಇಲಾಖೆಯಲ್ಲಿ ಈಗಾಗಲೇ ಟೆಂಡರ್ ಮೂಲಕ ತರಬೇತಿ ಕೇಂದ್ರಗಳನ್ನು ಆಯ್ಕೆ ಮಾಡಿದ್ದಾರೆ. ಹೆಚ್‌ಕೆಆರ್‌ಡಿಬಿಯೂ ಕೂಡಾ ಅದೇ ಕೇಂದ್ರಗಳನ್ನು ಉಪಯೋಗಿಸಿಕೊಂಡು ಈ ಭಾಗದ ವಿದ್ಯಾರ್ಥಿ/ಅಭ್ಯರ್ಥಿಗಳಿಗೆ ತರಬೇತಿಯನ್ನು ನೀಡಲು ಕಾರ್ಯಕ್ರಮವನ್ನು ಹಾಕಿಕೊಂಡಿದೆ. ಎಸ್‌ಸಿ,ಎಸ್ಟಿ, ಮತ್ತು ಮಹಿಳೆಯರಿಗೆ ಶೇ. 50 ರಷ್ಟು

Scanned by CamScanner
Scanned by CamScanner

ಸಬ್ಸಿಡಿ, ಬಿಪಿಎಲ್ ಕಾರ್ಡ ಹೊಂದಿದವರಿಗೆ ಶೇ.25 ರಷ್ಟು ಸಬ್ಸಿಡಿ ಮತ್ತು ವಿಶೇಷ ಚೇತನರಿಗೆ ಶೇ.75 ರಷ್ಟು ಸಬ್ಸಿಡಿ ನೀಡಲು ನಿರ್ಧರಿಸಲಾಗಿದೆ.ಈ ಭಾಗದಲ್ಲಿ ಸರಕಾರಿ ಪ್ರಾಥಮಿಕ ಶಾಲೆಗಳಲ್ಲಿ ಟಿಇಟಿ ಪರೀಕ್ಷೆ ಪಾಸು ಮಾಡಿದ ಅಭ್ಯರ್ಥಿಗಳ ಕೊರತೆಯಿಂದ ಶಿಕ್ಷಕರ ಹುದ್ದೆಗಳು ಹುದ್ದೆಗಳು ಖಾಲಿ ಉಳಿದಿವೆ. ಆದ್ದರಿಂದ ಟಿಇಟಿ ತರಬೇತಿ ಏರ್ಪಡಿಸಲು ಸೂಕ್ತ ಪ್ರಸ್ತಾವನೆ ಸಲ್ಲಿಸಲು ಶಿಕ್ಷಣ ಇಲಾಖೆಯ ಅಪರ ಆಯುಕ್ತರಿಗೆ ತಿಳಿಸಲಾಗಿದೆ.

ಮಂಡಳಿಯಲ್ಲಿ ಇಂತಹ ತರಬೇತಿಗಳನ್ನು ನಿರಂತರವಾಗಿ ಏರ್ಪಾಡು ಮಾಡಲು ವಿಶೇಷ ಶಾಖೆಯಾಗಲಿ, ಪರಿಣಿತಿಯಾಗಲಿ ಇರುವುದಿಲ್ಲ. ಆದ್ದರಿಂದ ತಾವು ಸಂಬಂಧ ಪಟ್ಟ ಇಲಾಖೆಯವರಿಗೆ ಸೂಕ್ತ ಪ್ರಸ್ತಾವನೆಯನ್ನು ಮಂಡಳಿಗೆ ಸಲ್ಲಿಸಲು ತಿಳಿಸಿದಲ್ಲಿ ಮಂಡಳಿಯು ಎಲ್ಲ ಸಹಕಾರವನ್ನು ನೀಡುತ್ತದೆಯೆಂಬ ವಿಷಯವನ್ನು ತಮ್ಮ ಆದ್ಯ ಗಮನಕ್ಕೆ ತರಲಾಗಿದೆ.

ತಮ್ಮ ವಿಶ್ವಾಸಿ,

13.8.19

ಕಾರ್ಯದರ್ಶಿ

ಹೈಕಪ್ರಅಮಂ ಕಲಬುರಗಿ

Scanned by CamScanner

ಅನುಚ್ಛೇದ 371ಜೆ ರನ್ವಯ ಸ್ಥಳೀಯ ವೃಂದದಲ್ಲಿ ನೇರ ನೇಮಕಾತಿ ಅಡಿಯಲ್ಲಿ ಖಾಲಿ ಇರುವ ಮತ್ತು ಭರ್ತಿಯಾಗಬೇಕಾದ ಹುದ್ದೆಗಳ ಮಾಹಿತಿ

(ದಿ:31.07.2019 ರಲ್ಲಿದ್ದಂತೆ)

| ಕ್ರ ಸಂ | ಇಲಾಖೆ | ಖಾಲಿ ಹುದ್ದೆಗಳ ನೇರ ನೇಮಕಾತಿ ಕುರಿತಂತೆ ಕೈಗೊಂಡ ಕ್ರಮ | | | | | |
|---|---|---|---|---|---|---|---|
| | | ನೇರ ನೇಮಕಾತಿ ಯಡಿ ತುಂಬಬೇಕಾಗಿರುವ ಗ್ರೂಪ್-ಎ, ಬಿ & ಸಿ ಒಟ್ಟು ಹುದ್ದೆಗಳ ಸಂಖ್ಯೆ | ನೇರ ನೇಮಕಾತಿ ಯಡಿ ಭರ್ತಿಯಾಗಿರುವ ಹುದ್ದೆಗಳ ಸಂಖ್ಯೆ | ನೇರ ನೇಮಕಾತಿಯಡಿ ಬಾಕಿ ಇರುವ ಹುದ್ದೆಗಳ ಸಂಖ್ಯೆ (3-4) | ಕಾಲಂ-5ರ ಹುದ್ದೆಗಳಿಗೆ ಸಂಬಂಧಿಸಿದಂತೆ ನೇಮಕಾತಿ ಪ್ರಕ್ರಿಯೆ ಜಾರಿಯಲ್ಲಿರುವ ಹುದ್ದೆಗಳ ವಿವರ: ಕೆ.ಪಿ.ಎಸ್.ಸಿ/ ಕೆ.ಇ.ಎ/ಇತರ ನೇಮಕಾತಿ ಸಂಸ್ಥೆಗಳಿಗೆ ಭರ್ತಿ ಮಾಡಲು ಪ್ರಸ್ತಾವನೆ ಕಳುಹಿಸಿರುವ ಹುದ್ದೆಗಳ ಸಂಖ್ಯೆ | ಕಾಲಂ-5ರ ಹುದ್ದೆಗಳಿಗೆ ಸಂಬಂಧಿಸಿದಂತೆ ನೇಮಕಾತಿ ಪ್ರಕ್ರಿಯೆ ಜಾರಿಯಲ್ಲಿರುವ ಹುದ್ದೆಗಳ ವಿವರ: ಕಾಲಂ-6 ಕ್ಕೆ ಸಂಬಂಧಿಸಿದಂತೆ ಈಗಾಗಲೇ ನೇಮಕಾತಿಗಾಗಿ ಪ್ರಕಟಣೆ ಹೊರಡಿಸಿರುವ ಹುದ್ದೆಗಳ ಸಂಖ್ಯೆ | ಕಾಲಂ-6 ರ ಹೊರತಾಗಿಯೂ ಇನ್ನೂ ನೇಮಕಾತಿ ಪ್ರಾರಂಭಿಸಬೇಕಾಗಿರುವ ಹುದ್ದೆಗಳ ಸಂಖ್ಯೆ |
| 1 | 2 | 3 | 4 | 5 | 6 | 7 | 8 |
| 17 | ಕೌಶಲ್ಯ ಅಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಇಲಾಖೆ | 248 | 43 | 205 | 194 | 180 | 11 |
| 18 | ಒಳಾಡಳಿತ ಇಲಾಖೆ | 3152 | 2177 | 975 | 598 | 536 | 377 |
| 19 | ಯೋಜನಾ ಇಲಾಖೆ | 58 | 20 | 38 | 38 | 0 | 0 |
| 20 | ಲೋಕೋಪಯೋಗಿ, ಒಳನಾಡು ಬಂದರು ಮತ್ತು ಜಲಸಾರಿಗೆ ಇಲಾಖೆ | 60 | 0 | 60 | 4 | 0 | 56 |
| 21 | ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ | 2596 | 1663 | 933 | 110 | 49 | 772 |
| 22 | ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ | 620 | 422 | 198 | 37 | 0 | 161 |
| 23 | ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ | 378 | 96 | 282 | 225 | 210 | 57 |
| 24 | ಅಲ್ಪಸಂಖ್ಯಾತರ ಅಭಿವೃದ್ಧಿ ಇಲಾಖೆ | 720 | [illegible] | 424 | 387 | 387 | 37 |
| 25 | ಇಂಧನ ಇಲಾಖೆ | 2472 | 732 | 1740 | 621 | 619 | 1119 |
| 26 | ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಇಲಾಖೆ | 7749 | 2257 | 5492 | 5223 | 583 | 269 |
| 27 | ಉನ್ನತ ಶಿಕ್ಷಣ ಇಲಾಖೆ | 1533 | 138 | 1395 | 514 | 309 | 881 |
| 28 | ಮಾಹಿತಿ ತಂತ್ರಜ್ಞಾನ, ಜೈವಿಕ ತಂತ್ರಜ್ಞಾನ, ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆ | 14 | 0 | 14 | 0 | 0 | 14 |

Scanned by CamScanner

ಡಾ. ಶಾಲಿನಿ ರಜನೀಶ್, ಭಾ.ಆ.ಸೇ.
ಸರ್ಕಾರದ ಪ್ರಧಾನ ಕಾರ್ಯದರ್ಶಿ
ಯೋಜನೆ, ಕಾರ್ಯಕ್ರಮ ಸಂಯೋಜನ ಮತ್ತು
ಸಾಂಖ್ಯಿಕ ಇಲಾಖೆ

ಕರ್ನಾಟಕ ಸರ್ಕಾರ

ಕರ್ನಾಟಕ ಸರ್ಕಾರದ ಸಚಿವಾಲಯ
ಕೊಠಡಿ ಸಂಖ್ಯೆ: 701, 7ನೇ ಮಹಡಿ
3ನೇ ಹಂತ, ಬಹುಮಹಡಿಗಳ ಕಟ್ಟಡ
ಬೆಂಗಳೂರು – 560 001
ದೂ : 080-22252352, 22032726
ಇ-ಮೇಲ್: prsplanning@gmail.com

ಅ.ಸ.ಪತ್ರ ಸಂಖ್ಯೆ: ಯೋಇ 295 ಪ್ರಕಾ 2019

ದಿನಾಂಕ: 14.08.2019

ಮಾನ್ಯರೆ,

ಹೈದ್ರಾಬಾದ್-ಕರ್ನಾಟಕ ಪ್ರದೇಶಾಭಿವೃದ್ಧಿ ಮಂಡಳಿಯ ಆಯುಕ್ತರು ಸಂಬಂಧಪಟ್ಟ ಇಲಾಖೆ ವತಿಯಿಂದಲೇ ಖಾಲಿ ಹುದ್ದೆಗಳನ್ನು ತುಂಬಲು ಆಕಾಂಕ್ಷಿತ ಅಭ್ಯರ್ಥಿಗಳಿಗೆ ತರಬೇತಿ ನಡೆಸಬೇಕೆಂದು ಕೋರಿರುತ್ತಾರೆ. ಆದುದರಿಂದ ಹೈದ್ರಾಬಾದ್-ಕರ್ನಾಟಕ ಪ್ರದೇಶದಲ್ಲಿ ಇರುವ ಖಾಲಿ ಹುದ್ದೆಗಳನ್ನು ತುಂಬಲು ತಮ್ಮ ಇಲಾಖೆಯಿಂದ ವಿಶೇಷ ಪೂರ್ವಭಾವಿ ತರಬೇತಿ ಕಾರ್ಯಕ್ರಮವನ್ನು ಅರ್ಹ ಆಕಾಂಕ್ಷಿಗಳಿಗಾಗಿ ನಡೆಸಲು ಈ ಮೂಲಕ ಕೋರಿದೆ. ಒಂದು ವೇಳೆ ಇದರ ಬಗ್ಗೆ ಏನಾದರು ಸ್ಥಳೀಯವಾಗಿ ಹೈದ್ರಾಬಾದ್-ಕರ್ನಾಟಕ ಪ್ರದೇಶಾಭಿವೃದ್ಧಿ ಮಂಡಳಿಯಿಂದ ಸಹಾಯ ಬೇಕಿದ್ದಲ್ಲಿ ಅದರ ವಿವರಗಳನ್ನು ನೀಡಲು ಕೋರಿದೆ.

ಅಲ್ಲದೆ, ಸದರಿ ಖಾಲಿ ಹುದ್ದೆಗಳನ್ನು ತುಂಬಲು ಅಭ್ಯರ್ಥಿಗಳು ಹೊಂದಬೇಕಾದ ವಿದ್ಯಾರ್ಹತೆಯ ವಿವರಗಳನ್ನು ಹುದ್ದೆವಾರು ನೀಡುವಂತೆ ಕೋರಿದೆ. ಇದರ ಆಧಾರದ ಮೇಲೆ ಸ್ಥಳೀಯ ಶಾಲಾ, ಕಾಲೇಜು ಅಥವಾ ಇನ್ನಿತರೆ ಸಂಪನ್ಮೂಲ ವ್ಯಕ್ತಿಗಳನ್ನು ಸಂಪರ್ಕಿಸಿ ಮಂಡಳಿ ವತಿಯಿಂದ ಕೆಲವು ಕಾರ್ಯಾಗಾರಗಳನ್ನು ನಡೆಸಲು ಕ್ರಮ ವಹಿಸಬಹುದಾಗಿದೆ.

ಗೌರವಗಳೊಂದಿಗೆ,

ತಮ್ಮ ವಿಶ್ವಾಸಿ,

ಶ್ರೀ ಮಹೇಂದ್ರ ಜೈನ್, ಭಾ.ಆ.ಸೇ.,
ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ,
ಶಿಕ್ಷಣ ಇಲಾಖೆ (ಉನ್ನತ ಶಿಕ್ಷಣ),
ಬಹುಮಹಡಿ ಕಟ್ಟಡ,
ಬೆಂಗಳೂರು.

TO Sri. Purushottam ADD
Sri. Venugopal Rg.
TD (Ad) | ADD

28/8/19

Scanned by CamScanner